<u>ಪ್ರಧಾನ ನ್ಯಾಯಾದೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ, ಕುಂದಾಪುರ</u>

ಸಿಸಿ ನಂಬ್ರ: 228/24
ಸಿಡಬ್ಲ್ಯೂ- 9
ಪಿಡಬ್ಲ್ಯೂ- 10

| | | |
|---|---|---|
| ಸಾಕ್ಷಿದಾರರ ಹೆಸರು | : | ಡಾ. ಉಲ್ಲಾಸ್ ಶೆಟ್ಟಿ |
| ತಂದೆಯ ಹೆಸರು | : | ಮಂಜಯ್ಯ ಶೆಟ್ಟಿ |
| ಪ್ರಾಯ | : | 44 ವರ್ಷ |
| ಉದ್ಯೋಗ | : | ಸಂದರ್ಶಕ ವೈದ್ಯರು ಆದರ್ಶ ಆಸ್ಪತ್ರೆ |
| ವಾಸ | : | ಮಂಗಳೂರು |

ದಿನಾಂಕ: **07- 04-2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೊಧಿಸಲಾಯಿತು

<u>ಮುಖ್ಯ ವಿಚಾರಣೆ: ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ</u>

ನಾನು 2013 ರಿಂದ ಇಲ್ಲಿಯವರೆಗೆ ಸಂದರ್ಶಕ ವೈದ್ಯಾಧಿಕಾರಿಯಾಗಿ ಆದರ್ಶ ಆಸ್ಪತ್ರೆ ಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

ಶಂಕರನಾರಯಣ ಪೊಲೀಸರು ಜಯಕರ ಎಂಬ ವ್ಯಕ್ತಿಯ ಗಾಯದ ಪ್ರಮಾಣ ಪತ್ರವನ್ನು ಬೇಕೆಂದು ಮನವಿ ಸಲ್ಲಿಸಿದ್ದು, ನಾನು ಜಯಕರರವರು ಹಲ್ಲೆಯಾದ 2 ದಿನಗಳ ನಂತರ ನಮ್ಮ ಆಸ್ಪತ್ರೆಗೆ ಬಂದಿದ್ದು, ಸದರಿ ಪೊಲೀಸರಿಗೆ ಜಯಕರರವರು ಪ್ರಥಮ ಚಿಕಿತ್ಸೆ ಪಡೆದ ವೈದ್ಯಕೀಯ ಪತ್ರ ತೆಗೆದುಕೊಳ್ಳಿ ಎಂದು ಹಿಂಬರಹ ನೀಡಿದ್ದು, ಹಿಂಬರಹವನ್ನು ನೋಡಿ ಗುರುತಿಸಿದ್ದು, ಅದನ್ನು ನಿ.ಪಿ. 9 ಎಂದು, ಸಹಿಯನ್ನು ನಿ.ಪಿ. 9(ಎ) ಎಂದು ಗುರುತಿಸಲಾಯಿತು. ನಾನು ಜಯಕರ ರವರು Discharge summary ನೀಡಿರುತ್ತೇನೆ. ಸದರಿ ದಾಖಲೆಯಲ್ಲಿ ಸಾಕ್ಷಿದಾರರ ಸಹಿ ಇಲ್ಲದ ಕಾರಣ ಸಹಿ ಗುರುತಿಸಿರುವುದಿಲ್ಲ. Discharge summary ನ್ನು ನಿ.ಪಿ. 10 ಎಂದು ಗುರುತಿಸಲಾಯಿತು.

<u>ಪಾಟಿ ಸವಾಲು: ಆರೋಪಿ ಪರ ವಕೀಲರಾದ ಶ್ರೀ ಎಮ್ ಡಿ ಎಸ್. ರವರಿಂದ</u>

1. ನಾನು ಗಾಯಾಳುಗೆ ಯಾವುದೇ ಚಿಕಿತ್ಸೆ ನೀಡಿರುವುದಿಲ್ಲ. ನಾನು ಆಸ್ಪತ್ರೆಯಲ್ಲಿ ಲಭ್ಯ ಇರುವ ದಾಖಲೆಗಳ ಆಧಾರದ ಮೇಲೆ ಮುಖ್ಯ ವಿಚಾರಣೆಯಲ್ಲಿ ತಿಳಿಸಿರುತ್ತೇನೆ.

<u>ಮರು ವಿಚಾರಣೆ: ಇಲ್ಲ</u>

ಓದಿ ಹೇ. ಕೇ. ಸರಿ ಇದೆ. ನನ್ನ ಹೇ. ಮೇ. ಬೆ. ಮಾಡಲಾಗಿದೆ

ಪ್ರಧಾನ ಸಿವಿಲ್ ನ್ಯಾಯಾದೀಶರು
ಮತ್ತು ಜೆ.ಎಂ.ಎಫ್.ಸಿ. ಕುಂದಾಪುರ